Water connection to new houses in Bangalore City

115. Sri M. S. KRISHNAN (Malleswaram).—

Will the Minister for Municipal Administration be pleased to state :—

(*a*) whether it has come to the notice of Government that the Bangalore Water Supply and Sewerage Board has been refusing to give house connection to newly built houses in Bangalore City;

(*b*) the reason for adopting such a policy ;

(*c*) whether the Government taking into consideration the hardships now being faced by the people, has directed the Chairman, Bangalore Water Supply and Sewerage Board to give water connections to these owners of houses who have made such requests ?

Sri B. BASAVALINGAPPA (Minister for Municipal Administration).—

(*a*) No.

(*b*) Does not arise.

(*c*) Does not arise in view of reply to clause (*a*).

ಶ್ರೀ ಬಿ. ವಿ. ಕಕ್ಕಿಲಾಯ.—ಬೆಂಗಳೂರು ಕಾರ್ಪೊರೇಷನ್‌ಗೆ ಹೊಸದಾಗಿ ಸೇರಿಸಿಕೊಂಡ 34 ಹಳ್ಳಿಗಳಿಗೆ ಇನ್ನೂ ನೀರಿನ ಸರಬರಾಜನ್ನು ಒದಗಿಸಿಲ್ಲ ; ಮತ್ತು ಟ್ರಸ್ಟ್ ಬೋರ್ಡಿಗೆ ಹೊಸದಾಗಿ ಸೇರಿದ ಪ್ರದೇಶಗಳಿಗೆ ಕೂಡ ನೀರಿನ ಕನೆಕ್ಷನ್ ಸಿಕ್ಕಿಲ್ಲ ; ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

†ಶ್ರೀ ಬಿ. ಬಸವಲಿಂಗಪ್ಪ.—ಕಾವೇರಿ ಯೋಜನೆ ಕೆಲಸ ಪೂರ್ಣಗೊಳಿಸಿದ ಬಳಿಕ ಎಲ್ಲ ಪ್ರದೇಶಗಳಿಗೂ ನೀರನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ.—ಕಾವೇರಿ ಯೋಜನೆ ಕೆಲಸ ಮುಗಿಯುವವರೆಗೆ ಬೆಂಗಳೂರಿನ ಎಲ್ಲ ಭಾಗಗಳಿಗೂ ನೀರನ್ನು ಒದಗಿಸುವುದಕ್ಕೆ ತಾತ್ಕಾಲಿಕವಾದ ವ್ಯವಸ್ಥೆಯನ್ನು ಏನಾದರೂ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಸೀವರೇಜ್ ಬೋರ್ಡಿನವರು ಎಲ್ಲ ಭಾಗಗಳಿಗೂ ನೀರನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈಗ 5 ರೀತಿಯಲ್ಲಿ ಮನೆಗಳನ್ನು ಕಟ್ಟಲಾಗುತ್ತಿದೆ. ಟ್ರಸ್ಟ್ ಬೋರ್ಡಿಗೆ ಸೇರಿದ ಪ್ರದೇಶಗಳಲ್ಲಿ ಕಟ್ಟುವುದು, ಹಳ್ಳಿಗಳ ಪಕ್ಕದಲ್ಲಿರುವ ಹ್ಯಾಮ್ಲೆಟ್ ಪ್ರದೇಶಗಳಲ್ಲಿ ಕಟ್ಟುವುದು, ಅನ್-ಅಥರೈಸ್ಡ್ ಲೇ-ಔಟ್ಸ್, ರೆವಿನ್ಯೂ ಪಾಕೆಟ್ಸ್ ಮತ್ತು ಪ್ರೈವೇಟ್ ಲೇ-ಔಟ್ಸ್, ಇಂತಹ ವಲಯಗಳಲ್ಲಿ ಕಟ್ಟತಕ್ಕಂಥ ಮನೆಗಳಿಗೆ ಯಾವ ರೀತಿ ನೀರನ್ನು ಒದಗಿಸಬೇಕು ಎಂಬ ಬಗ್ಗೆ ಸಿವರೇಜ್ ಬೋರ್ಡಿನವರು ವ್ಯವಸ್ಥೆ ಮಾಡುತ್ತಾರೆ. ಆದಷ್ಟು ಪ್ರದೇಶಗಳಿಗೆ ಶೀಘ್ರದಲ್ಲಿಯೇ ಇರತಕ್ಕಪ್ಪು ನೀರನ್ನೇ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆ.

Non-filling up of vacancies in Sri Shivaji Vidyalaya High School, Haliyal.

128. Sri VIRUPAKSH M. GHADI (Haliyal).—

Will the Minister for Education be pleased to state :—

(*a*) whether Sri Shivaji Vidyalaya High School in Haliyal taluk, District North Kanara is under Government Management at present ;

(SRI VIRUPAKSH M. GHADI)

(*b*) whether Government is aware that 5 to 6 teachers' posts in the said High School were vacant during the last year 1971–72 ;

(*c*) if so, the reason for non-filling up of these posts ;

(*d*) whether the officials concerned had brought this fact to the notice of the Government in time ; if not, the action, the Government proposes to take against such officials ?

Sri A. R. BADARINARAYANA (Minister for Education).—

(*a*) By Order No. ED 40 SLB 70, dated 30th April 1971, this Institution is directed to be taken over by Government and the process of taking over is not yet complete.

(*b*) Yes.

(*c*) Out of five candidates sponsored by the Employment Exchange and called for interview, only one turned up. When he was selected and posted he also did not join duty.

(*d*) Does not arise in view of reply to clause (*c*).

ಶ್ರೀ ವಿರೂಪಾ ಎಂ. ಘಾಡಿ.— ಈ ಶಾಲೆಯನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವುದಕ್ಕೆ ಇನ್ನು ಎಷ್ಟು ಸಮಯ ಬೇಕು ?

†ಶ್ರೀ ಎ. ಆರ್. ಬದರೀನಾರಾಯಣ್.—ಒಂದು ರೀತಿಯಲ್ಲಿ ಸರ್ಕಾರಕ್ಕೆ ಸೇರಿಸಿಕೊಂಡಂತೆ ಎಂದು ಭಾವಿಸಬಹುದು. ಅಕೌಂಟಿಂಗ್ ಲೆಕ್ಕಗಳೆಲ್ಲಾ ತಿರ್ಮಾನವಾಗಬೇಕಾಗಿದೆ. ಅದಕ್ಕಾಗಿ ಸ್ವಲ್ಪ ಸಮಯವಾಗುತ್ತದೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಕೆಲವು ಉಪಾಧ್ಯಾಯರುಗಳು ಒಂದೇ ಸ್ಥಳದಲ್ಲಿ 10–15 ವರ್ಷಗಳಿಂದ ಇದ್ದುಕೊಂಡು ರಾಜಕೀಯದ ಕೆಲಸಗಳನ್ನು ಮಾಡುತ್ತಿದ್ದಾರೆ. ಇಂತಹ ವರನ್ನು ಜಾಗ್ರತೆ ಬೇರೆ ಬೇರೆ ಜಾಗಗಳಿಗೆ ವರ್ಗ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

Sri A. R. BADARINARAYANA.—They are not supposed to take active part in the politics. The teachers should not be politicians.

ಶ್ರೀ ಬಿ. ಬೈರಪ್ಪಾಜಿ.—ಈಗ ಸರ್ಕಾರಕ್ಕೆ ವಹಿಸಿಕೊಳ್ಳತಕ್ಕಂಥ ಶಿವಾಜಿ ವಿದ್ಯಾಲಯವು ಮೊದಲು ಯಾವ ಸ್ಥಳೀಯ ಸಂಸ್ಥೆಯಿಂದ ನಡೆಸಲ್ಪಡುತ್ತಿತ್ತು ?

ಶ್ರೀ ಎ. ಆರ್. ಬದರೀನಾರಾಯಣ್.—ಇದು ಮುನಿಸಿಪಾಲಿಟಿಯವರ ಆಡಳಿತದಲ್ಲಿ ಇತ್ತು. ಅವರು ಸರ್ಕಾರಕ್ಕೆ ತೆಗೆದುಕೊಳ್ಳಿ ಎಂದು ಕೇಳಿದ್ದಾರೆ. ಇದರ ಆಸ್ತಿಪಾಸ್ತಿಯ ಲೆಕ್ಕ ನೋಡ ಬೇಕಾಗಿರುವುದರಿಂದ ಸರ್ಕಾರಕ್ಕೆ ಸೇರಿಸಿಕೊಳ್ಳುವುದಕ್ಕೆ ಸ್ವಲ್ಪ ನಿಧಾನವಾಗಿದೆ.

ಶ್ರೀ ಟಿ. ಆರ್. ಶಾಮಣ್ಣ.—ಅನೇಕ ಶಾಲೆಗಳಲ್ಲಿ ಉಪಾಧ್ಯಾಯರ ಜಾಗಗಳು ಖಾಲಿಯಿವೆ ಅವುಗಳನ್ನು ಕೂಡಲೆ ಭರ್ತಿ ಮಾಡುತ್ತೀರಾ ? ಮತ್ತು ಈಗ ವಿದ್ಯಾಭ್ಯಾಸದ ಪದ್ಧತಿ ಬದಲಾವಣೆ ಯಾಗಿರುವುದರಿಂದ ಅನೇಕ ಜನ ಉಪಾಧ್ಯಾಯರುಗಳಿಗೆ ಕೆಲಸವಿಲ್ಲದಂತೆ ಆಗಿ ಅವರಿಗೆ ಉಚಿತವಾಗಿ ಸಂಬಳ ಕೊಡಲಾಗುತ್ತಿದೆ ; ಇವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಆರ್. ಬದರಿನಾರಾಯಣ್.—ಮಾನ್ಯ ಸದಸ್ಯರು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಇಂದು ನಮ್ಮ ರಾಜ್ಯದಲ್ಲಿ ಉಪಾಧ್ಯಾಯರು ಎನ್ನುವ ವರ್ಗ ಏನಿದೆ ಅವರಲ್ಲಿ ಪ್ರಾಮಾಣಿಕರಾದವರು ಮತ್ತು ಮುಗ್ಧರಾದವರು ಇದ್ದಾರೆ. ಅಂತಹವರ ಬಗ್ಗೆ ಏನಾದರು ಆರೋಪ ಬಂದರೆ ಅದನ್ನು ಪರಿಶೀಲನೆ ಮಾಡಿ ನಂತರ ಕ್ರಮ ತೆಗೆದುಕೊಳ್ಳುತ್ತಿರೋ ಅಥವಾ ಯಾರಾದರೂ ಹೇಳಿದರು ಎಂಬುದಾಗಿ ಕ್ರಮ ತೆಗೆದುಕೊಳ್ಳುತ್ತೀರೋ ?

ಶ್ರೀ ಎ. ಆರ್. ಬದರಿನಾರಾಯಣ್.—ಎಲ್ಲ ಕ್ಷೇತ್ರಗಳಲ್ಲಿರುವಂತೆ ಉಪಾಧ್ಯಾಯ ವರ್ಗದಲ್ಲಿಯೂ ಕೂಡ ಒಳ್ಳೆಯವರು ಕೆಟ್ಟವರು ಇದ್ದಾರೆ. ಒಳ್ಳೆಯವರಿಗೆ ಪ್ರೋತ್ಸಾಹ ಕೊಡುತ್ತೇವೆ, ತಪ್ಪು ಮಾಡಿದವರಿಗೆ ಶಿಕ್ಷೆ ಕೊಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಮೊದಲು ತಾಲ್ಲೂಕ್ ಬೋರ್ಡ್ ಮತ್ತು ಮುನಿಸಿಪಾಲಿಟಿಗಳ ವಶದಲ್ಲಿ ಇದ್ದಂಥ ಶಾಲೆಗಳಿಗೆ ಉಪಾಧ್ಯಾಯರನ್ನು ಜಿಲ್ಲಾಧಿಕಾರಿಯವರು ನೇಮಕಮಾಡುತ್ತಿದ್ದರು. ಆದರೆ ಈಗ ಜಿಲ್ಲಾಧಿಕಾರಿಯವರು ನೇಮಕ ಮಾಡಬಾರದೆಂದು ಸರ್ಕಾರದವರು ಹೇಳಿದ್ದಾರೆ. ಆದರೆ ಸರ್ಕಾರದವರು ಕೂಡ ಖಾಲಿ ಇರುವ ಜಾಗಗಳಿಗೆ ನೇಮಕ ಮಾಡುತ್ತಿಲ್ಲ. ಇದರಿಂದ ಸ್ಥಳೀಯ ಸಂಸ್ಥೆಗಳ ಶಾಲೆಗಳು ಹಾಳಾಗುತ್ತಿವೆ. ಈ ಗೊಂದಲವನ್ನು ತಪ್ಪಿಸುವುದಕ್ಕೆ ಒಂದೇ ರೀತಿಯ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ತಯಾರು ಮಾಡುತ್ತೀರಾ?

ಶ್ರೀ ಎ. ಆರ್. ಬದರೀನಾರಾಯಣ್.—ಇದರಲ್ಲಿ ಸ್ವಲ್ಪ ಕಷ್ಟಗಳಿವೆ. It will take some time more. I think, the Hon'ble Member will bear with patience. But the work will not be allowed to suffer.

ಶ್ರೀ ವಿರೂಪಾಕ್ಷ ಎಂ. ಘಾಡಿ.—ಈ ಶಾಲೆಯಲ್ಲಿ ಹೋದ ವರ್ಷ 5—6 ಉಪಾಧ್ಯಾಯರುಗಳ ಹುದ್ದೆಗಳು ಖಾಲಿ ಇದ್ದರೂ ಅವುಗಳನ್ನು ಭರ್ತಿ ಮಾಡದಿರುವುದಕ್ಕೆ ಯಾರು ಕಾರಣರು ? ಮತ್ತು ಅಂತಹವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಎ. ಆರ್. ಬದರೀನಾರಾಯಣ್.—ಉದ್ಯೋಗ ವಿನಿಮಯ ಕೇಂದ್ರದವರು ಕಳುಹಿಸಿದಂಥ 5 ಮಂದಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆದಿದ್ದು, ಆ ಪೈಕಿ ಒಬ್ಬರು ಮಾತ್ರ ಹಾಜರಾಗಿದ್ದರು. ಆಯ್ಕೆಯ ನಂತರ, ಅವರನ್ನು ಹುದ್ದೆಯಲ್ಲಿ ನೇಮಿಸಿದರೂ ಕೂಡ, ಅವರು ಕೆಲಸಕ್ಕೆ ಬಂದು ಹಾಜರಾಗಲಿಲ್ಲ. ಅಂದಮೇಲೆ ಊರಿನಲ್ಲಿ ಏನು ದೋಷವಿದೆಯೋ ಗೊತ್ತಿಲ್ಲ.

ಶ್ರೀ ವಿರೂಪಾಕ್ಷ ಎಂ. ಘಾಡಿ.—ಡಿ. ಡಿ. ಪಿ. ಐ. ಮತ್ತು ಹೆಡ್‌ಮಾಸ್ಟರ್ ಇದಕ್ಕೆ ಕಾರಣ ವೆಂದು ಹೇಳುತ್ತೇನೆ. ಟೆಂಪರರಿಯಾಗಿ ನೇಮಕ ಮಾಡುವುದಕ್ಕೆ ಡಿ. ಡಿ. ಪಿ. ಐ. ಗೆ ಅಧಿಕಾರ ವಿದ್ದರೂ ಸಹ ಅವರು ನೇಮಕ ಮಾಡಲಿಲ್ಲ. ಹೆಡ್‌ಮಾಸ್ಟರ್ ಅವರು ಉಪಾಧ್ಯಾಯರುಗಳ ನೇಮಕದ ವಿಚಾರ ಸಮಿತಿಯಲ್ಲಿ ತೀರ್ಮಾನವಾಗಬೇಕು, ಸರ್ಕಾರಕ್ಕೆ ಹೋಗಬೇಕು ಎಂದು ಹೇಳುತ್ತಾರೆ ; ಮತ್ತು ಸರ್ಕಾರದವರು ಇಂತಹ ಶಾಲೆಗಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ ವಾದ್ದರಿಂದ ಉಪಾಧ್ಯಾಯರುಗಳು ಕೆಲಸಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆ?

ಶ್ರೀ ಎ. ಆರ್. ಬದರೀನಾರಾಯಣ್.—ಹೆಡ್‌ಮಾಸ್ಟರ್ ಅವರ ಕೈವಾಡ ಇದರಲ್ಲಿ ಇದ್ದರೆ ಅದನ್ನು ಸರಿ ಮಾಡುತ್ತೇವೆ.

Scarcity of drinking water in Villages of Gulbarga District

131. **Sri PRABHAKAR TELKAR** (Kalagi).—

Will the Minister for Community Development and Social Welfare be pleased to state :—

(*a*) whether Government is aware that there is acute scarcity of drinking water in several villages of Gulbarga District ;